ಅಸಲು ದಾವೆ ಸಂಖ್ಯೆ -129/2010
ಪಿ.ಡಬ್ಲ್ಯು - 01
ದಿನಾಂಕ: 06-02-2026
ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

**ಪಾಟೀ ಸವಾಲು: ಪ್ರತಿವಾದಿಯರ ಪರ ಶ್ರೀ. ಎಸ್ ಆರ್ ಎಚ್ ವಕೀಲರಿಂದ**

ನಿಮಗೆ ಜಾತ್ರಪ್ಪ ರವರ ಪರಿಚಯ ಇದ್ದಾರಾ ಎಂದರೆ ಇದ್ದಾರೆ. ಜಾತ್ರಪ್ಪ ರವರು ಯಾವಾಗ ತೀರಿಕೊಂಡರು ಎಂದರೆ ನನಗೆ ಮಾಹಿತಿ ಇಲ್ಲ. ಅಂದಾಜು ಎಷ್ಟು ವರ್ಷದ ಹಿಂದೆ ತೀರಿಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನೀವು ಜಾತ್ರಪ್ಪ ರವರನ್ನು ನೋಡಿದ್ದೀರಾ ಎಂದರೆ ಅವರನ್ನು ನೋಡಿಲ್ಲ ಆದರೆ ಅವರ ಮಗನಾದ ಫಕ್ಕೀರಪ್ಪ ರವರನ್ನು ನೋಡಿದ್ದೇನೆ. ನಿಮ್ಮ ಮದುವೆಯಾಗಿ ಎಷ್ಟು ವರ್ಷ ಆಯಿತು ಎಂದರೆ ನನ್ನ ಮದುವೆಯಾಗಿ 50 ವರ್ಷ ಆಯಿತು. ನಿಮ್ಮ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ನಿಮ್ಮ ವಯಸ್ಸು ಎಷ್ಟು ಅಂತಾ ಬರೆಸಿದ್ದೀರಿ ಎಂದರೆ ನನಗೆ ಗೊತ್ತಿಲ್ಲ. ನೀವೆನಾದರೂ ಹೇಳಿ ಬರೆಸಿದ್ದೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ನಿಮ್ಮ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ಏನು ಬರೆದಿದ್ದಾರೆ ಎಂದು ನೀವು ಓದಿಸಿ ತಿಳಿದುಕೊಂಡಿದ್ದೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ.

ಜಾತ್ರಪ್ಪನ ಮಗ ಫಕ್ಕೀರಪ್ಪ ರವರು ಎಷ್ಟನೇ ಇಸವಿಯಲ್ಲಿ ತೀರಿಕೊಂಡರು ಎಂದರೆ ನನಗೆ ಗೊತ್ತಿಲ್ಲ. ಅಂದಾಜು ಎಷ್ಟು ವರ್ಷ ಹಿಂದೆ ತೀರಿಕೊಂಡಿದ್ದಾರೆ ಎಂದು ಹೇಳಲು ಆಗುತ್ತದೆಯಾ ಎಂದರೆ ನನಗೆ ನೆನೆಪಿಲ್ಲ. ಫಕ್ಕೀರಪ್ಪ ರವರಿಗೆ ಎಷ್ಟು ಜನ ಸಹೋದರ ಸಹೋದರಿಯರು ಎಂದರೆ ಅವರು ಒಬ್ಬನೇ ಮಗ ಇರುತ್ತಾನೆ. ಫಕ್ಕೀರಪ್ಪ ರವರು ತೀರಿಕೊಂಡ ಮೇಲೆ ನಿವೇನಾದರೂ ವಾರಸಾ ಮಾಡಿಕೊಂಡಿದ್ದೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಫಕ್ಕೀರಪ್ಪ ರವರು ನಿಮ್ಮ ಅಜ್ಜ ಎಂದು ತೋರಿಸಲು ಯಾವುದಾದರೂ ದಾಖಲೆಯನ್ನು ಹಾಜರುಪಡಿಸಿದ್ದೀರಾ ಎಂದರೆ ಆ ವೇಳೆಯಲ್ಲಿ ಯಾವುದೇ ದಾಖಲೆ ಇರಲಿಲ್ಲ ಆದ್ದರಿಂದ ದಾಖಲೆ ಹಾಜರುಪಡಿಸಿಲ್ಲ. ಫಕ್ಕೀರಪ್ಪ ರವರು ನಿಮ್ಮ ಅಜ್ಜ ಎಂದು ತೋರಿಸಲು ಯಾವಾಗ ದಾಖಲೆ ಆಯಿತು ಎಂದರೆ ನೆನೆಪಿಲ್ಲ.

ಫಕ್ಕೀರಪ್ಪ ನಿಮ್ಮ ಮನೆತನದ ಹಿರಿಯ ಎಂದು ತೋರಿಸಲು ಸಾಕಷ್ಟು ದಾಖಲೆಗಳನ್ನು ಹಾಜರುಪಡಿಸಿದ್ದೇನೆ ಎಂದು ನಿಮ್ಮ ವಕೀಲರಿಗೆ ಮಾಹಿತಿ ನಿಡೀದ್ದೀರಾ ಎಂದರೆ ನೀಡಿರುತ್ತೇನೆ. ಯಾವ ದಾಖಲೆಗಳನ್ನು ಹಾಜರುಪಡಿಸಿದ್ದೀರಿ ಎಂದರೆ ಆಧಾರ ಕಾರ್ಡ ಜೆರಾಕ್ಸನ್ನು

ಹಾಜರುಪಡಿಸಿದ್ದೇನೆ. ಉಳಿದ ದಾಖಲೆಗಳು ನೆನೆಪಿಲ್ಲ. ನೀವು ಹಾಜರುಪಡಿಸಿದ ದಾಖಲೆಗಳು ಯಾವಾಗ ತಂದಿರಿ ಎಂದರೆ 3-4 ತಿಂಗಳ ಹಿಂದೆ ತಂದಿರುತ್ತೇನೆ. ನಿಮಗೆ 3-4 ತಿಂಗಳ ಹಿಂದಿನಿಂದ ಇಲ್ಲಿಯವರೆಗೂ ಆದ ದಾಖಲೆಗಳ ಬಗ್ಗೆ ನಿಮಗೆ ನೆನೆಪಿಲ್ಲ ಎಂದರೆ ಹೊಲದ ದಾಖಲೆಗಳು ಹಾಜರುಪಡಿಸಿದ್ದೇನೆ. ಮುಂದುವರೆದು ಹೊಲದ ಉತಾರ ಮತ್ತು ಆಧಾರ ಕಾರ್ಡ ಜೆರಾಕ್ಸನ್ನು ಹಾಜರುಪಡಿಸಿದ್ದೇನೆ. ಹೊಲದ ಉತಾರವನ್ನು ಯಾವ ವರ್ಷದ್ದು ಹಾಜರುಪಡಿಸಿದ್ದೀರಿ ಎಂದರೆ ನೆನೆಪಿಲ್ಲ. ಹೊಲದ ಉತಾರಗಳಲ್ಲಿ ನೀವು ಫಕ್ಕೀರಪ್ಪನ ವಾರಸುದಾರರು ಎಂದು ಏನಾದರೂ ಬರೆದೀದ್ದಾರಾ ಎಂದರೆ ಬರೆಸಿರುತ್ತೇವೆ. ನೀವು ಹಾಜರಪಡಿಸಿದ ದಾಖಲಾತಿಗಳಲ್ಲಿ, ನೀವು ಫಕ್ಕೀರಪ್ಪನ ವಾರಸುದಾರರು ಎಂದು ಎಲ್ಲಿಯೂ ಸಹ ಬರೆದಿಲ್ಲ ಎಂದರೆ ಬರೆದಿರುತ್ತಾರೆ. ಫಕ್ಕೀರಪ್ಪನ ತೀರಿಕೊಂಡ ಎಷ್ಟು ವರ್ಷಗಳ ನಂತರ ನಿಮ್ಮ ಹೆಸರು ಕಂದಾಯ ದಾಖಲೆಗಳಲ್ಲಿ ನಮೂದಾಯಿತು ಎಂದರೆ ನನಗೆ ನೆನೆಪಿಲ್ಲ. ನಿಮ್ಮ ಹೆಸರು ಯಾವ ಆಧಾರದ ಮೇಲೆ ದಾವಾ ಆಸ್ತಿಗಳ ಉತಾರಗಳಲ್ಲಿ ನಮೂದಾಯಿತು ಎಂದರೆ ನಮ್ಮ ತಾಯಿಯವರು ನನ್ನ ಮತ್ತು ನನ್ನ ಸಹೋದರ ಸಹೋದರಿಯರ ಹೆಸರುಗಳನ್ನು ನಮೂದಿಸಿರುತ್ತಾರೆ.

ನಿಪಿ- 28 ಮತ್ತು 29 ರ ಪ್ರಕಾರ ನಾಗವ್ವ, ಮಹಾದೇವಪ್ಪ, ಮಾಲವ್ವ, ಸಂತೋಷ ರವರ ಹೆಸರುಗಳು ದಾಖಲಾಯಿತು ಎಂದರೆ ಆಗಿರುವುದಿಲ್ಲ. ನಿಮಗೂ ದಾವಾ ಆಸ್ತಿಗಳಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯು ಜಾತ್ರಪ್ಪನ ಆಸ್ತಿಯಾಗಿದ್ದು ಫಕ್ಕೀರಪ್ಪನಿಗೆ ಬಂದಿರುತ್ತದೆ ಎಂದರೆ ಸರಿ. ಫಕ್ಕೀರಪ್ಪ ರವರಿಗೆ ಯಾವುದೇ ಮಕ್ಕಳು ಇರಲಿಲ್ಲ ಮಲ್ಲಪ್ಪ ರವರನ್ನು ತನ್ನ ಮಗನಂತ ನೋಡುತ್ತಿದ್ದು ಫಕ್ಕೀರಪ್ಪನು ತನ್ನ ಜೀವವಿತಾವಧಿಯಲ್ಲಿ ಮಲ್ಲಪ್ಪನ ಹೆಸರನ್ನು ನಮೂದಿಸಿರುತ್ತಾನೆ ಎಂದರೆ ಸರಿಯಲ್ಲ. ಮಲ್ಲಪ್ಪನ ಹೆಸರುದಾಖಲಾದ ಬಗ್ಗೆ ನೀವು ಅದನ್ನು ಎಲ್ಲಿಯೂ ಪ್ರಶ್ನಿಸಿರುವುದಿಲ್ಲ ಎಂದರೆ ಅವನು ಖೊಟ್ಟಿಯಾಗಿ ಅವನ ಹೆಸರನ್ನು ಮಾತ್ರ ದಾಖಲಿಸಿಕೊಂಡಿದ್ದಾನೆ.

ನಿಮ್ಮ ತಾಯಿ ಲಚ್ಚವ್ವ ರವರು ಒಂದು ಆರ್ ಟಿ ಎಸ್ ಪ್ರಕರಣ ಹೂಡಿದ್ದರು ಎಂದರೆ ಸರಿ. ಆ ಕಾಲಕ್ಕೆ ಉಪವಿಭಾಗಾಧಿಕಾರಿಗಳು ಸವಣೂರ ರವರ ಜೊತೆಯಲ್ಲಿ ಮಿಲಾಪೆಯಾಗಿ ಪ್ರತಿವಾದಿಯ 3 ರಿಂದ 6 ರವರ ಯಾವುದೇ ತಕರಾರು ಇಲ್ಲ ಎಂದು ದಾಖಲೆ ಸೃಷ್ಟಿಸಿ ಖೊಟ್ಟಿಯಾಗಿ ಲಚ್ಚವ ರವರು ತಮ್ಮ ಹೆಸರನ್ನು ದಾಖಲಿಸಿಕೊಂಡಿರುತ್ತಾರೆ ಎಂದರೆ ಸರಿ.

ಲಚ್ಚವ ರವರ ಹೆಸರು ದಾಖಲು ಮಾಡಲು ಮಲ್ಲಪ್ಪ ರವರಾಗಲಿ ಅಥವಾ ಅವರ ವಾರಸುದಾರರಾಗಿಲಿ ಯಾವುದೇ ಅರ್ಜಿಯನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನಿಮ್ಮ ತಾಯಿಯ ಹೆಸರನ್ನು ದಾವಾ ಆಸ್ತಿಯಲ್ಲಿ ಸೇರಿಸಲು ಮಲ್ಲಪ್ಪ ಮತ್ತು ಅವರ ವಾರಸುದಾರಾಗಲೀ ಯಾವುದಾದರೂ ಅರ್ಜಿಯನ್ನು ನೀಡಿದ್ದರೆ ಆ ಅರ್ಜಿಯನ್ನು ನೀವು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ಉಪವಿಭಾಗಾಧಿಕಾರಿಗಳ ಸವಣೂರ ಮುಂದೆ ಮತ್ತು ಈ ನ್ಯಾಯಾಲಯಕ್ಕೆ ನೀವು ಫಕ್ಕೀರಪ್ಪನ ವಾರಸುದಾರರು ಎಂದು ತೋರಿಸಲು ಯಾವುದೇ ದಾಖಲಾತಿಗಳು ಹಾಜರುಪಡಿಸಿಲ್ಲ ಎಂದರೆ ಹಾಜರುಪಡಿಸಿದ್ದೇನೆ. ಉಪವಿಭಾಗಾಧಿಕಾರಿಗಳ ಸವಣೂರ ರವರ ಮುಂದೆ ನೀವು ಫಕ್ಕೀರಪ್ಪನ ವಾರಸುದಾರರು ಎಂದು ತೋರಿಸಲು ದಾಖಲೆಗಳನ್ನು ಹಾಜರಪಡಿಸಿದ್ದೀರಾ ಎಂದರೆ ನೆನೆಪಿಲ್ಲ.

ಈ ಹಿಂದೆ ನೀವು ಮೂಲ ದಾವೆಯಲ್ಲಿ ಫಕ್ಕೀರಪ್ಪನ ವಾರಸುದಾರರು ಎಂದು ತೋರಿಸಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯರು ತಮ್ಮ ಪ್ರತಿವಾದ ಪತ್ರವನ್ನು ಸಲ್ಲಿಸಿದ ಬಳಿಕ ನೀವು ಫಕ್ಕೀರಪ್ಪನ ವಾರಸುದಾರರು ಎಂದು ಅರ್ಜಿ ಹಾಕಿ ವಾದ ಪತ್ರ ತಿದ್ದುಪಡಿ ಮಾಡಿರುತ್ತೀರಿ ಎಂದರೆ ಸರಿಯಲ್ಲ. ಎಲ್ಲಾ ವಿಷಯಗಳು ನಿಮಗೆ ತಿಳಿದಿದ್ದರು ಉದ್ದೇಶ ಪೂರ್ವಕವಾಗಿ ಸುಳ್ಳು ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ನಿಮ್ಮ ಸಾಕ್ಷ್ಯಪ್ರಮಾಣ ಪತ್ರದಲ್ಲಿ ಇರುವ ಎಲ್ಲಾ ವಿಷಯಗಳು ಮತ್ತು ನಿಪಿ- 28 ರಿಂದ 33 ಸುಳ್ಳಿನಿಂದ ಕೂಡಿರುತ್ತದೆ ಎಂದರೆ ಸರಿಯಲ್ಲ. ಈ ಹಿಂದೆ ನಿಮ್ಮ ಮುಖ್ಯ ವಿಚಾರಣೆಯಲ್ಲಿ ಹೇಳಿದ ವಿಷಯವನ್ನೇ ಈಗ ಸಲ್ಲಿಸಿದ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲೂ ಅದೇ ವಿಷಯವನ್ನು ತಿಳಿಸಿದ್ದೀರಿ ಎಂದರೆ ಸರಿ. ಸದರಿ ಪ್ರಕರಣವು ಪುನಃ ಚೌಕಾಶಿ ಮಾಡಲು ಬಂದಾಗ, ನೀವು ಫಕ್ಕೀರಪ್ಪನ ವಾರಸದುದಾರರು ಎಂದು ತೋರಿಸಲು ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ಮಲ್ಲಪ್ಪ ವಾರಸುದಾರರಾದ ಪ್ರತಿವಾದಿಯರ ಆಸ್ತಿಯನ್ನು ಎತ್ತಿ ಹಾಕುವ ಉದ್ದೇಶದಿಂದ ಸುಳ್ಳು ದಾವೆ ಮಾಡಿ ಸುಳ್ಳು ಸಾಕ್ಷಿ ನುಡಿಯುತ್ತೀದ್ದೀರಿ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

( ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೆ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು, ಸವಣೂರು.

OS No. 129/2010   PW.1